ಎಂ.ಎಸ್.ಐ.ಎಲ್ ನಿಂದ ಚಾಮರಾಜನಗರ ಜಿಲ್ಲೆಗೆ ನೀಡಿರುವ ವೈನ್ ಶಾಪ್‌ಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 104
ಸದಸ್ಯರ ಹೆಸರು : ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ)
ಉತ್ತರಿಸುವ ಸಚಿವರು : ಶ್ರೀ ರೇಣುಕಾಚಾರ್ಯ (ಮಾನ್ಯ ಅಬಕಾರಿ ಸಚಿವರು)

ಪ್ರಶ್ನೆಗಳು:

ಅ) ಚಾಮರಾಜನಗರ ಜಿಲ್ಲೆಗೆ ಎಂ.ಎಸ್.ಐ.ಎಲ್ ವತಿಯಿಂದ ನೀಡಿರುವ ವೈನ್ ಶಾಪ್‌ಗಳು ಎಷ್ಟು?

ಆ) ಆ ಪೈಕಿ ಈವರೆವಿಗೂ ಎಷ್ಟು ವೈನ್ ಶಾಪ್‌ಗಳು ಪ್ರಾರಂಭವಾಗಿವೆ? (ಮಾಹಿತಿ ನೀಡುವುದು)

ಇ) ಉಳಿದ ಅಂಗಡಿಗಳನ್ನು ಪ್ರಾರಂಭಿಸಲು ಇರುವ ತೊಂದರೆ ಏನು? (ವಿವರ ನೀಡುವುದು)

ಉತ್ತರಗಳು:

ಅ) ಚಾಮರಾಜನಗರ ಜಿಲ್ಲೆಗೆ ಎಂ.ಎಸ್.ಐ.ಎಲ್ ಸಂಸ್ಥೆ ವತಿಯಿಂದ 10 ಮದ್ಯ ಮಾರಾಟ ಮಳಿಗೆಗಳನ್ನು ನಿಗದಿಪಡಿಸಲಾಗಿದೆ.

ಆ) ಆ ಪೈಕಿ ಈವರೆಗೂ ಕೆಳಕಂಡ 04 ಸನ್ನದುಗಳು ಪ್ರಾರಂಭಗೊಂಡು ವಹಿವಾಟು ನಡೆಸುತ್ತಿರುತ್ತವೆ.

1. ಅಸೆಸ್‌ಮೆಂಟ್ ನಂ: 677/635, ನಾರಾಯಣಸ್ವಾಮಿ ಗುಡಿ ಬೀದಿ, ಚಾಮರಾಜನಗರ
2. ನಂ. 219, ಚಾಮರಾಜನಗರ ರಸ್ತೆ, ಗುಂಡ್ಲುಪೇಟೆ ಟೌನ್.
3. ಖಾತಾ ಸಂಖ್ಯೆ: 310/227, ಪಾಳ್ಯ ರಸ್ತೆ, ನರೀಪುರ ಗ್ರಾಮ, ಕೊಳ್ಳೇಗಾಲ ತಾಲ್ಲೂಕು.
4. ನಂ. 275/166, ಕೆ.ವಿ.ಎನ್ ಕಾಂಪ್ಲೆಕ್ಸ್, ಬಂಡಳ್ಳಿ ಮುಖ್ಯರಸ್ತೆ, ಹನೂರು, ಕೊಳ್ಳೇಗಾಲ ತಾಲ್ಲೂಕು.

ಇ) ಉಳಿದ ಮದ್ಯದಂಗಡಿಗಳನ್ನು ತೆರೆಯುವ ವಿಚಾರವಾಗಿ

ಸಾರ್ವಜನಿಕರ, ಸ್ಥಳೀಯ ಸಂಘ–ಸಂಸ್ಥೆಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳ ವಿರೋಧದ ಹಿನ್ನೆಲೆಯಲ್ಲಿ ಸಾರ್ವಜನಿಕ ಆಕ್ಷೇಪಣೆ ಇಲ್ಲದ ಸ್ಥಳಗಳಲ್ಲಿ ಅಬಕಾರಿ ನಿಯಮಗಳನುಸಾರ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಎಂ.ಎಸ್.ಐ.ಎಲ್ ಸಂಸ್ಥೆಯವರಿಗೆ ತಿಳಿಸಿದ್ದು, ಪ್ರಸ್ತಾವನೆಗಳನ್ನು ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಆರಾಧನಾ ಸಮಿತಿಗೆ ನಾಮ ನಿರ್ದೇಶನದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 105
ಸದಸ್ಯರ ಹೆಸರು : ಶ್ರೀ ರಹೀಂ ಖಾನ್ (ಬೀದರ್)
ಉತ್ತರಿಸುವ ಸಚಿವರು : ಡಾ. ವಿ.ಎಸ್.ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

ಪ್ರಶ್ನೆಗಳು:

ಅ) ವಿಧಾಸಭಾ ಮತ ಕ್ಷೇತ್ರವಾದ ಬೀದರ್ (ಉ)ದಲ್ಲಿ 2008 ರಿಂದ 2011ರವರೆಗೆ ಹಲವಾರು ಬಾರಿ ಆರಾಧನಾ ಸಮಿತಿಯ ನಾಮ ನಿರ್ದೇಶನ ಮಾಡಲು ಮನವಿ ಪತ್ರ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? (ಮಾಹಿತಿ ನೀಡುವುದು)

ಆ) ಬೀದರ್ (ಉ) ವಿಧಾನಸಭಾ ಕ್ಷೇತ್ರಕ್ಕೆ 2008 ರಿಂದ 2011ರವರೆಗೆ ಮುಜರಾಯಿ ಇಲಾಖೆಯಿಂದ ಮಂಜೂರಾದ ಅನುದಾನ ಎಷ್ಟು ಹಾಗೂ ಖರ್ಚು ವೆಚ್ಚಗಳೆಷ್ಟು? (ವಿವರ ನೀಡುವುದು).

ಉತ್ತರಗಳು:

ಅ) ಹೌದು, ಸರ್ಕಾರದ ಪರಿಶೀಲನೆಯಲ್ಲಿದೆ.